

‘ಭೂಮಿಯಲ್ಲಿರುವ ಯಾವುದೇ ವಸ್ತುವನ್ನು ತೋರಿಸಿ, ನಾವು ಅದರ ಪ್ರತಿಕೃತಿಯನ್ನು ಸಿದ್ಧಪಡಿಸಿಕೊಡುತ್ತೇವೆ’ ಎಂದೆನ್ನುತ್ತಾರೆ ಇಂಡೋನೇಷ್ಯಾ ಕಲಾವಿದರು. ಅವರು ಪ್ರತಿಕೃತಿಗಳ ನಿರ್ಮಾಣಕ್ಕೆ ಬಲು ಸುಲಭದ ತಂತ್ರಜ್ಞಾನವನ್ನು ಬಳಸುತ್ತಾರೆ. ಸ್ಟೀಲ್, ಮೆಷ್, ಸಿಮೆಂಟ್, ವಾಟರ್ ಪ್ರೂಫ್ ಹಾಗೂ ಡಿಜಿಟಲ್ ಬಣ್ಣ ಇವುಗಳಷ್ಟೇ ಅವರು ಬಳಸುವ ಪದಾರ್ಥಗಳು. ಹೆಬ್ಬಂಡೆಯಿಂದ ಹರಿಯುವ ನೀರಿನವರೆಗೂ ಏನು ಬೇಕಾದರೂ ಅವರು ನಿರ್ಮಾಣ ಮಾಡುತ್ತಾರೆ.

‘ಶೋಗಳಲ್ಲಿ ನಿರ್ಮಾಣ ಮಾಡಿದಂತೆ ಇವುಗಳೇನು ತಾತ್ಕಾಲಿಕ ಪ್ರತಿಕೃತಿಗಳಲ್ಲ. ಮನೆ ಇರುವಷ್ಟು ಕಾಲ ಅವುಗಳು ಶಾಶ್ವತವಾಗಿ ಇರುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತೇವೆ’ ಎಂದು ಹೇಳುತ್ತಾರೆ. ಸಿದ್ಧಗೊಂಡ ಮನೆಯನ್ನು ಅವರ ಸುಪರ್ದಿಗೆ ಬಿಟ್ಟರೆ ವಾರದಲ್ಲಿ ಅದರ ಚಿತ್ರಣವನ್ನೇ ಬದಲಾಯಿಸಿ ಬಿಡುತ್ತಾರೆ.

ಮನೆ ಮೂಲೆ ಸಾಮಾನ್ಯವಾಗಿ ಬಳಕೆಯಾಗದ ಜಾಗ. ಉಪಯೋಗಕ್ಕೆ ಬಾರದ ವಸ್ತುಗಳನ್ನು ಇಡುವ ಸ್ಥಳವದು ಎನ್ನುವುದು ಅಲಿಖಿತ ನಿಯಮ. ಆದ್ದರಿಂದಲೇ ಮೂಲೆಗುಂಪು ಎಂಬ ನುಡಿಗಟ್ಟೇ ಸೃಷ್ಟಿಯಾಗಿದೆ. ಇಂಡೋನೇಷ್ಯಾದ ಕಲಾವಿದರು ಆ ಮೂಲೆಗಳನ್ನು ಅತ್ಯಂತ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುತ್ತಾರೆ. ಮರವನ್ನು ಅಲ್ಲಿಯೇ ಸೃಷ್ಟಿಸುತ್ತಾರೆ ಅಥವಾ ಬಳ್ಳಿಯೊಂದು ಅಲ್ಲಿಂದಲೇ ಹಬ್ಬಿ ಗೋಡೆ ತುಂಬಾ ವ್ಯಾಪಿಸಿ ಹೂವು ಬಿಡುವಂತೆ ನೋಡಿಕೊಳ್ಳುತ್ತಾರೆ.

### ವಿನ್ಯಾಸದಲ್ಲಿ ವೈವಿಧ್ಯ

ಒಳಾಂಗಣ ವಿನ್ಯಾಸದಲ್ಲಿ ಏನೆಲ್ಲ ಮಾಡಬಹುದು? ಸದ್ಯ ಬೆಂಗಳೂರಿನಲ್ಲೇ ವಾಸ್ತವ್ಯ ಹೂಡಿರುವ ಇಂಡೋನೇಷ್ಯಾದ ಕಲಾವಿದ ವಾರೂಚ್ ಅವರ ಮುಂದೆ ಈ ಪ್ರಶ್ನೆ ಇಟ್ಟರೆ, ‘ನಿಮ್ಮ ಕಲ್ಪನೆ ಏನಿದೆ ಹೇಳಿ, ನಾವು ಅದನ್ನೇ ನಿಮ್ಮ ಮನೆಯಲ್ಲಿ ಸೃಷ್ಟಿಸುತ್ತೇವೆ’ ಎಂದು ಸವಾಲಿನ ಧಾಟಿಯಲ್ಲಿ ಉತ್ತರಿಸುತ್ತಾರೆ. ‘ಪುಟ್ಟ ಇರುವೆಯಿಂದ ದೊಡ್ಡ ಪರ್ವತದವರೆಗೆ ನೀವು ಬಯಸಿದ್ದನ್ನೆಲ್ಲ ಸೃಷ್ಟಿಸಿಕೊಡುತ್ತೇವೆ. ನಿಮಗೇನು ಹಂಪೆಯ

## ಬಾಲ್ಕನಿಯಲ್ಲೊಂದು ಈಜುಕೊಳ!

ಮನೆ ಕಟ್ಟುವ ಆಸೆ ಹೊಂದಿದ ಪ್ರತಿಯೊಬ್ಬರಿಗೂ ತಮ್ಮ ಸೂರು ಹೀಗೇ ಇರಬೇಕು ಎಂಬ ಕನಸುಗಳು ಇದ್ದೇ ಇರುತ್ತವೆ. ಕೆಲವರಿಗೆ ಮನೆಯಲ್ಲೇ ಈಜುಕೊಳ ಹೊಂದುವ ಆಸೆಯಾದರೆ, ಇನ್ನು ಕೆಲವರಿಗೆ ಪಡಸಾಲೆಯಲ್ಲಿ ಒಂದು ಬೆಚ್ಚಗಾಗಿಸುವ ಕುಲುಮೆ ಇದ್ದರೆ ಚೆನ್ನ ಎಂಬ ಆಕಾಂಕ್ಷೆ. ಅದಕ್ಕೆ ತಕ್ಕಂತಹ ಒಳಾಂಗಣ ವಿನ್ಯಾಸಗಳು ಸೂರುಪ್ರಿಯರನ್ನು ಸೆಳೆಯುತ್ತಿವೆ.

ಅಕ್ವೇರಿಯಂ ಬೆಡ್, ಮಲಗುವ ಕೋಣೆಗೆ ಅರಣ್ಯದ ರೂಪ ನೀಡುವ ಗೊಂಡೆ ದೀಪ (ಚಾಂಡ್ಲಿಯರ್), ಬಾಲ್ಕನಿಯಲ್ಲಿ ಈಜುಕೊಳ, ಕೋಣೆಯೊಳಗೆ ಮತ್ತೊಂದು ಕೊಳ, ಕೆಲಸ ಮಾಡುವ ಪಡಸಾಲೆಯೊಳಗೆ ಕಾಲಿನ ಅಡಿಯಲ್ಲಿ ಸಮುದ್ರದ ದಂಡೆ ವಾತಾವರಣ ಉಂಟು ಮಾಡುವಂತಹ ಮರಳು, ಜಾರುವ ಸ್ಟೇರ್‌ಕೇಸ್ ( ಸ್ಪೈರಲ್ ಸ್ಟೇರ್‌ಕೇಸ್ ಸ್ಲೈಡ್), ಕೆಳಗೆ ಆಳವಾದ ಗುಂಡಿ ಇರುವಂತಹ ಸ್ನಾನದ ಕೋಣೆಯಲ್ಲಿ ಗಾಜಿನ ನೆಲಹಾಸು, ಪಾವಟಿಗೆ ಅಡಿಯಲ್ಲಿನ ವಾರ್ಡ್‌ರೋಬ್, ಲಂಬ ಉದ್ಯಾನ... ಹೀಗೆ ಲೆಕ್ಕವಿಲ್ಲದಷ್ಟು ವಿನ್ಯಾಸಗಳಿವೆ. ಖರ್ಚು ಎಷ್ಟಾಗುತ್ತದೆ ಎಂದು ಕೇಳಲೇಬೇಡಿ. ಜೇಬಿನ ತುಂಬಾ ಕಾಸಿದ್ದವರು ಇಂತಹ ವಿನ್ಯಾಸಕ್ಕೆ ಕೈಹಾಕಬಹುದು. ಒಂದು ಮಾತ್ರ ನಿಜ ಲಾವಂಚದ ಚಾಪೆಗಳನ್ನು ಹೊಂದಿದ್ದ ರಾಜರ ಅಂದಿನ ಶಯನ ಕೋಣೆಗಳಿಗೂ ಇಂದಿನ ಅಕ್ವೇರಿಯಂ ಬೆಡ್‌ಗಳಿಗೂ ಅಜಗಜಾಂತರ ವ್ಯತ್ಯಾಸವಿದೆ.